


# ಯಾರಿಗೂ ಗೊತ್ತಿಲ್ಲದ ಕತೆ

ಶ್ರೀ ದತ್ತಾತ್ರೇಯ ನಾಟಕ ಕಂಪನಿಯ ನಟ ಶಾಂತಣ್ಣ ಪೂಜೆಗೆ ಹೂ ಕೀಳಕೆ ಬೆಳಕರಿಯಕೂ ಮೊದಲೇ ಮನೆ ಮನೆ ಕಾಂಪೋಂಡು ನೋಡ್ಕೋತಾ ಹೊರಟಿದ್ದ. ಅಲ್ಲೇ ಒಂದು ಕಾಂಪೋಂಡಿಗೆ ವರಕ್ಕೆಂಡು ಜಯದೇವಾ ಬೀಡಿ ಸೇದ್ತಾ ನಿಂತಿದ್ದ ಸಾವು ಇವನನ್ನ ನೋಡಿ ನಕ್ಕ. ಒನ್ನತಿ ತಲೆಯಾಡುಸ್ದ. ಬಾ ಅಂತ ಕರೆದಂಗಾಯ್ತು ಶಾಂತಣ್ಣಂಗೆ. “ಈಗ ಟೈಮಿಲ್ಲ, ಶೋ ಅದ್ಮೇಲೆ ಸಿಗ್ತೀನಿ. ಥೇಟ್ರಿಗೆ ಬಾ” ಅಂತಂದ ಶಾಂತಣ್ಣ.

ಹಂಗೂ ಹಿಂಗೂ ಊರು ಅಡ್ಡಾಡಿ ಟೈಮ್ ಪಾಸ್ ಮಾಡಿ ಸಾವು ಬೆಳಗಿನ ಜಾವ ನಾಕೂವರೆಗೆ ಕಂಪನಿ ಥೇಟರ್‌ಗೆ ಬಂದ. ಶೋ ಮುಗಿದಿತ್ತು. ಸಾವನ್ನು ಬಿಟ್ರೆ ಅಲ್ಲಿ ಒಂದು ಜೀವ ಇರಲಿಲ್ಲ. ಒಳಗೆ ಕಾಲಿಟ್ರೆ ಕತ್ತಲೋ ಕತ್ತಲು. ಶಾಂತಣ್ಣನ ವಾಸನೆ ಹಿಡ್ಕೊಂತಾ ಸಾವು ಥೇಟರ್‌ನಗೆ ಅತ್ಲಗಿತ್ಲಗೆ ಅಡ್ಡಾಡಿದ. ಇದ್ದಕ್ಕಿದ್ದಂಗೇ ಧಿಗ್ಗಂತ ಬೆಳಕೋ ಬೆಳಕಾಯ್ತು. ಎದುರಿಗಿರೋನ್ನ ನೋಡಿ ಸಾವು ಅದುರಿಬಿಟ್ಟ. ಥೇಟ್ ತನ್ನಂಗೇ ಇದಾನೆ. ತಾನೇ ಅವನು ಅವನೇ ತಾನು ಅನ್ನಬೇಕು ಹಂಗಿದನೆ. ಎದುರಿಗಿದ್ದೋನ್ನ ನೋಡ್ತಾಯಿದ್ದಂಗೇ ಎದುರಿಗೆ ನಿಂತೋನು ಹ್ಹಹ್ಹ ಅಂತ ಅಬ್ಬರಿಸಿದ. ಹೆಂಗೆ ಅಬ್ಬರಿಸಿದ್ದ ಅಂದ್ರೆ, ಎದೆ ಧಸ್ ಅಂದು, ಸಾವು ಒಂದೇ ಏಟಿಗೆ ಕುಸಿದು ಬಿದ್ದ. ಮತ್ತೆ ಏಳಲೇ ಇಲ್ಲ. ಶಾಂತಣ್ಣ ಮೇಕಪ್ ವರುಸ್ಕೆಂಡು ಭಾಳಾ ಹೊತ್ತು ಅಂಗತ್ತ ಬಿದ್ದ ಸಾವಿನ ಮುಂದೆ ಕೂತೇ ಇದ್ದ. ಬೆಳಕರೀತು. ಪೂಜೆಗೆ ಹೂ ಬೇಕಲ್ಲ, ಮನೆ ಮನೆ ಕಾಂಪೋಡು ಹುಡುಕ್ಕೊಂಡು ಹೊರಟ.

ಅದಕ್ಕೇ ಹಿರಿಯರು ಹೇಳಿದ್ದು, ಸಾವಾದ್ರೇನು, ಯಾರಾದ್ರೇನು, ನಾಟಕದೋರನ್ನ ತಡವಕೋಬೇಡಿ ಅಂತ.


## ಎಸ್. ಸುರೇಂದ್ರನಾಥ್

ಹುಟ್ಟಿದ್ದು ಮೂಡುಬಿದಿರೆಯಲ್ಲಿ. ಓದಿದ್ದು ದಾವಣಗೆರೆಯಲ್ಲಿ. ಅನೇಕ ನಾಟಕಗಳನ್ನು ತಾವೇ ಬರೆದು ನಿರ್ದೇಶಿಸಿದ್ದಾರೆ. ಅವುಗಳಲ್ಲಿ ‘ಹುಲಗೂರ ಹುಲಿಯವ್ವ’, ‘ಮರ್ಯಾದೆ ಪ್ರಶ್ನೆ’, ‘ನೀ ನಾನಾದ್ರೆ ನಾ ನೀನೇನಾ’, ‘ಜನತೆಯ ಶತ್ರು’, ‘ಒಂದು ಆಕಸ್ಮಿಕ ಸಾವು’, ‘ನಾ ತುಕಾರಾಮ್ ಅಲ್ಲ’, ‘ಸಂಕ್ರಮಣ’, ‘ಷೈಲಾಕ್’, ‘ಸರ್ಕಲ್ ಆಫ್ ಲೈಫ್’ ಮುಖ್ಯವಾದವು. ‘ಕಟ್ಟು ಕತೆಗಳು’, ‘ತಾಪತ್ರಯ’ ಎಂಬ ಕಥಾಸಂಕಲನಗಳು, ‘ಎನ್ನ ಭವದ ಕೇಡು’ ಮತ್ತು ‘ಗಾಳಿಗೆ ಬಿದ್ದ ಚಂದ್ರನ ತುಂಡುಗಳು’ ಕಾದಂಬರಿಗಳು ಪ್ರಕಟವಾಗಿವೆ.